






# ಹೀಗೊಂದು ಸರ್ಕಾರಿ ಶಾಲೆ

**ಕಲ್ಲಿಕೋಟೆಯ ನಡಕ್ಕಾವಿನ ಈ ಶಾಲೆಯನ್ನು ನೋಡಿದರೆ ಇದೊಂದು ಸರ್ಕಾರಿ ಶಾಲೆ ಎಂದು ನಂಬಲೇ ಆಗುವುದಿಲ್ಲ. ಶತಮಾನ ದಾಟಿದ ಈ ಶಾಲೆ ದೇಶದ ಹತ್ತು ಅತ್ಯುತ್ತಮ ಸರ್ಕಾರಿ ಶಾಲೆಗಳಲ್ಲಿ ಒಂದು!**

■ ಚಿತ್ರ– ಲೇಖನ: **ಕೃಷ್ಣ ಮೂರ್ತಿ**

ಟರ್ಫ್ ಫುಟ್ಬಾಲ್ ಕ್ರೀಡಾಂಗಣ, ವಾಲಿಬಾಲ್ ಮತ್ತು ಬ್ಯಾಡ್ಮಿಂಟನ್ ಕೋರ್ಟ್, ಸ್ವಚ್ಛ ಶೌಚಾಲಯಗಳು, ನಾನ್ನೂರಕ್ಕೂ ಹೆಚ್ಚು ವಿದ್ಯಾರ್ಥಿನಿಗಳು ಆಹಾರ ಸೇವಿಸಬಹುದಾದ ಊಟದ ಕೋಣೆ, ಆಧುನಿಕ ಬೋಧನಾ ಉಪಕರಣಗಳಿರುವ ಕಲಿಕೆಯ ಕೊಠಡಿಗಳು, ಜಿಮ್ನಾಸಿಯಂ ಮತ್ತು ಐ.ಐ.ಎಂ ಸಂಸ್ಥೆಯಿಂದ ತರಬೇತಿ ಪಡೆದ ಶಿಕ್ಷಕ ವರ್ಗ... – ಇದೆಲ್ಲ ನಮ್ಮ ಮೆಟ್ರೋ ನಗರಗಳ ಪಬ್ಲಿಕ್ ಸ್ಕೂಲ್‌ಗಳ ವಿವರಣೆಯಲ್ಲ, ಇದು ಅಪ್ಪಟ ಸರಕಾರಿ ಶಾಲೆ! ಕಲ್ಲಿಕೋಟೆಯ ನಡಕ್ಕಾವು ಸರಕಾರಿ ಹೆಣ್ಮಕ್ಕಳ ಹೈಯರ್ ಸೆಕೆಂಡರಿ ವಿದ್ಯಾಲಯ.

ನಗರದ ಹೃದಯಭಾಗದಲ್ಲಿರುವ ಈ ಶಾಲೆಯ ಕಂಪೌಂಡ್ ದಾಟಿ ಒಳ ಬಂದರೆ ಸಣ್ಣ ಕಾಲು ದಾರಿಯ ಬದಿಗೆ ಹರಡಿ ನಿಂತ ಸುಂದರ ಹೂಗಳು. ಎಡ ಬದಿಗೆ ಮೂರು ಅಂತಸ್ತಿನ ಹೈಯರ್ ಸೆಕೆಂಡರಿ ವಿಭಾಗದ ಕಟ್ಟಡ. ಕಾಲು ದಾರಿ ಬಂದು ಸೇರುವುದು ಒಂದು ಪ್ರಧಾನ ಹಾಗೂ ಅತ್ಯಾಕರ್ಷಕ ಕಟ್ಟಡಕ್ಕೆ. ಗೋಡೆಯ ಮೇಲೆ ಸ್ಫೂರ್ತಿದಾಯಕ ಬರಹಗಳು, ಒಂದು ಬದಿಗೆ ಅತ್ಯಾಕರ್ಷಕ ಚಿತ್ರ. ಸರಕಾರಿ ಶಾಲೆಗಳ ಬಗೆಗಿನ ನಮ್ಮ ಕಲ್ಪನೆಗಳೆಲ್ಲ ಇಲ್ಲಿ ತಲೆಕೆಳಗಾಗುತ್ತವೆ.

ಒಟ್ಟು ಪರಿಸರ ಕಲಿಕೆಗೆ ಇದು ಅತ್ಯಂತ ಸೂಕ್ತ. ನೂರಿಪ್ಪತ್ತು ವರ್ಷಗಳಿಗೂ ಮೀರಿದ ಹಳೆಯ ಶಾಲೆಯಿದು. 1893ರಲ್ಲಿ ಬ್ರಿಟಿಷರಿಂದ ಸ್ಥಾಪನೆಯಾದ ಈ ಶಾಲೆ ಮೊದಲಿನ ವರ್ಷಗಳಲ್ಲಿ ಕೇವಲ ತರಬೇತಿ ಸಂಸ್ಥೆಯಾಗಿತ್ತು. ಅತ್ಯಂತ ಸಾಧಾರಣ ಶಾಲೆಯಾಗಿದ್ದ ನಡಕ್ಕಾವು ಶಾಲೆಯನ್ನು ಇಂದಿನ ಅತ್ಯುತ್ತಮ ಸ್ಥಿತಿಗೆ ತಲುಪಿಸಿದ್ದು 'ಪ್ರಿಸಂ' ಎಂಬ ಯೋಜನೆ. ಅದರಲ್ಲಿ ಮುಖ್ಯ ಪಾತ್ರ ವಹಿಸಿದ್ದು ಫೈಝಲ್ ಮತ್ತು ಶಬಾನಾ ಫೌಂಡೇಶನ್. ಇದೆಲ್ಲ ಬೆಳವಣಿಗೆಗೆ ಕಾರಣವಾದದ್ದು ಸರಕಾರದ 'ಪ್ರಿಸಂ' ಎಂಬ ಪದ್ಧತಿ.